ಶ್ರೀ ಜಿ. ರಾಮಕೃಷ್ಣ.—ಸ್ವಾಮಿ, ನನ್ನ ಕ್ಷೇತ್ರದಲ್ಲಿ ೮೪ ಲಕ್ಷ ರೂಪಾಯಿ ಖರ್ಚು ಮಾಡಿ ೯ ಕೆರೆಗಳನ್ನು ಕಟ್ಟಿದ್ದಾರೆ. ಮೊದಲನೆಯದು ಆಳಂದ ತಾಲೂಕಿನಲ್ಲಿ ೪೫೮ ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಕೊಡುತ್ತೇವೆಂದು ಹೇಳಿ ಕೇವಲ ೧೧೦ ಹೆಕ್ಟೇರ್‌ಗಳಿಗೆ ನೀರನ್ನು ಕೊಟ್ಟಿದ್ದೀರಿ. ಅದೇ ರೀತಿ ಗುಲ್ಬರ್ಗಾ ತಾಲ್ಲೂಕಿನಲ್ಲಿ ಮಲ್ಲಾಪುರ ಟ್ಯಾಂಕ್‌ನಿಂದ ೨೭೩ ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಕೊಡುತ್ತೇವೆಂದು ಹೇಳಿ ಕೇವಲ ೬೦ ಹೆಕ್ಟೇರ್‌ಗಳಿಗೆ ನೀರನ್ನು ಕೊಟ್ಟಿದ್ದೀರಿ ಅದೇರೀತಿ ಕೋಲ್ಲೂಡ ಟ್ಯಾಂಕ್‌ನಿಂದ ೪೪.೮೦ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತೇವೆಂದು ಹೇಳಿ ಕೇವಲ ೫ ಹೆಕ್ಟೇರ್‌ಗಳಿಗೆ ನೀರನ್ನು ಕೊಟ್ಟಿದ್ದೀರಿ. ಕವಲಾಪುರ ಟ್ಯಾಂಕ್‌ನಿಂದ ೧೪೮ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತೇವೆಂದು ಹೇಳಿ ೪೦ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತಿದ್ದೀರಿ.ನಾನು ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಕೇವಲ ೩-೪ ಎಕರೆಗೂ ಕೂಡ ನೀರು ಹೋಗುತ್ತಿಲ್ಲ. ಆ ಕಾಲುವೆಯಲ್ಲೂ ಕೂಡ ನೀರು ಹೋಗುತ್ತಿಲ್ಲ. ತಮಗೆ ಅಧಿಕಾರಿಗಳು ಕೊಟ್ಟಿರತಕ್ಕ ಪಟ್ಟಿ ಸರಿಯಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಸಚಿವರಲ್ಲಿ ನನ್ನ ಒಂದು ಮನವಿ ಏನೆಂದರೆ ತಾವು ಗುಲ್ಬರ್ಗಾಕ್ಕೆ ಯಾವಾಗಾದರೂ ಭೇಟಿ ನೀಡಿದಾಗ ಈ ೯ ಕೆರೆಗಳ ಪೈಕಿ ಎಷ್ಟು ಸಾಧ್ಯವೋ ಅಷ್ಟು ಕೆರೆಗಳನ್ನಾ ತಾವೇ ಹೋಗಿ ನೋಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ — ನಾನು ಸ್ಥಳಕ್ಕೆ ಹೋಗಿ ಸ್ವತಃ ನೋಡಿಕೊಂಡು ಬಂದಿದ್ದೇನೆಂದು ಅವರು ತಮ್ಮ ಅನುಭವದಿಂದ ಹೇಳುತ್ತಿದ್ದಾರೆಂದು ನಾನು ನಂಬುತ್ತೇನೆ. ಆದರೆ ನನಗೆ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ನಾನು ಹೇಳುತ್ತಿದ್ದೇನೆ. ಒಂದು ವೇಳೆ ಎಲ್ಲಾದರೂ ತೊಂದರೆಯಾಗಿದ್ದರೆ ಕಾರಣ ಏನು ಎಂಬುದನ್ನು ಪರಿಶೀಲಿಸುತ್ತೇವೆ. ಮಳೆ ಬರಡೆ ನೀರು ಇಲ್ಲದೆ ತೊಂದರೆಯಾಗಿದ್ದರೆ ಅದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಟೆಕ್ನಿಕಲ್ ತೊಂದರೆಯಿಂದಾಗಿ, ಕಾಲುವೆ ಸರಿಯಿರದೆ ತೂಬು ಸರಿಯಿರದೆಯಾದರೂ ತೊಂದರೆಯಾಗಿದ್ದರೆ, ಇದಕ್ಕೆ ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಇಂಜಿನಿಯರರ್‌ಗಳಿಗೆ ಕಳುಹಿಸಿಕೊಡುತ್ತೇನೆ. ಅವರು ಸ್ಯಾಕ್ಷ್ಯಡ್‌ನ್ನು ಕಳುಹಿಸಿಕೊಡುತ್ತಾರೆ. ಅವರು ಹೋಗುವಾಗ ನಿಮ್ಮನ್ನೂ ಕೂಡ ಕರೆದುಕೊಂಡು ಹೋಗುವಂತೆ ಹೇಳುತ್ತೇನೆ. ನೀವು ಹೋಗಿ ಎಲ್ಲಿ ಏನು ದೋಷವಿದೆ ಎಂಬುದನ್ನು ತಿಳಿಸಿ.

ಶ್ರೀ ಜಿ. ರಾಮಕೃಷ್ಣ.—ಸ್ಯಾಕ್ಷ್ಯಡ್‌ನ ಜೊತೆ ನನ್ನನ್ನೂ ಕಳುಹಿಸಿಕೊಡುವುದಾದರೆ ನಾನೂ ಹೋಗುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಸ್ಯಾಕ್ಷ್ಯಡ್‌ನವರು ಬೇರೆ ಎಲ್ಲೋ ಹೋಗಿದ್ದಾರೆ ಅವರು ಬಂದಕೂಡಲೇ ನಿಮ್ಮನ್ನೂ ಕರೆದುಕೊಂಡು ಹೋಗುವಂತೆ ಅವರಿಗೆ ಪತ್ರವನ್ನು ಬರೆಯುತ್ತೇನೆ. ತಪ್ಪಿತಸ್ಥರು ಯಾರೇ ಇರಲಿ ಅವರ ವಿರುದ್ಧ ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಬೆಂಗಳೂರು ಮತ್ತು ಮೈಸೂರು ನಡುವೆ ಇರುವ ಮಂಡ್ಯ ರಸ್ತೆಯನ್ನು ಮಂಡ್ಯ ನಗರದ ಬಳಿ ಡಬಲ್ ರಸ್ತೆ ಮಾಡುವ ವಿಚಾರ ಕುರಿತು.

೧೫೬೧. ಶ್ರೀ ಎಸ್. ಡಿ. ಜಯರಾಮ್ (ಮಂಡ್ಯ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರು ನಡುವೆ ಇರುವ ಮಂಡ್ಯ ರಸ್ತೆಯನ್ನು ಮಂಡ್ಯ ನಗರದ ಬಳಿ ಡಬಲ್ ರಸ್ತೆ ಮಾಡುವ ವಿಚಾರ ಯಾವ ಹಂತದಲ್ಲಿದೆ,

ಆ) ಅದರ ಅಂದಾಜು ವೆಚ್ಚವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು.)

ಅ) ಬೆಂಗಳೂರು–ಮೈಸೂರು ಮಂಡ್ಯ ರಸ್ತೆಯಲ್ಲಿ ಮಂಡ್ಯ ನಗರದ ವ್ಯಾಪ್ತಿಯಲ್ಲಿ ಹಾಯ್ದು ಹೋಗುವ ೩.೨೭೫ ಕಿ. ಮೀ. ಉದ್ದದ ರಸ್ತೆ ಭಾಗವನ್ನು ೮.೨ ಮೀಟರ್‌ನಿಂದ ೧೧.೮೦ ಮೀಟರ್ ವರೆಗೆ ವಿಸ್ತರಿಸುವ ಪ್ರಸ್ತಾವನೆಗೆ ಮಂಜೂರಾತಿ ನೀಡಲಾಗಿದ್ದು, ಕೆಲಸವು ಪ್ರಗತಿಯಲ್ಲಿದೆ.

ಆ) ಮೇಲ್ಕಂಡ ಪ್ರಸ್ತಾವನೆಯಂ ಅಂದಾಜು ವೆಚ್ಚ ೪೯೫ ಲಕ್ಷ ರೂಪಾಯಿಗಳು.

ಶ್ರೀ ಎಸ್. ಡಿ. ಜಯರಾಮ್.—ಮಂಡ್ಯ ನಗರದಲ್ಲಿ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಡಬಲ್ ರಸ್ತೆಯನ್ನು ಅಲ್ಲಿ ಮಾಡಿಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಂಡ್ಯ ನಗರದಲ್ಲಿ ಮೈಸೂರು ಬೆಂಗಳೂರು ರಾಜ್ಯ ಹೆದ್ದಾರಿ ಬಹಳ ಪ್ರಮುಖವಾದ ಹೆದ್ದಾರಿ ಎಂದು ಗೊತ್ತಿರತಕ್ಕಂಥ ವಿಷಯ. ಬೈ ಪಾಸ್ ರಸ್ತೆಯನ್ನು ಮಾಡುವುದಕ್ಕೆ ಸ ಮಾರು ೪೫ ಲಕ್ಷ ರೂಪಾಯಿಗಳು ಆಗುತ್ತದೆ. ಬೈಪಾಸ್ ರಸ್ತೆಯ ಕಾರ್ಯವನ್ನು ತಗೆದುಕೊಂಡು ಅದನ್ನು ಪೂರ್ಣಮಾಡಲು ಪ್ರಯತ್ನ ಮಾಡುತ್ತೇನೆ. ಏತಕ್ಕೆಂದರೆ ಈ ರಸ್ತೆಯಲ್ಲಿ ಸಾಕಷ್ಟು ವಾಹನಗಳ ಆಕಸ್ಮಿಕಗಳು ಜಂಟಾಗಿ ಮರಣಕ್ಕೆ ತುತ್ತಾಗಿರುವ ಘಟನೆಗಳೂ ನಡೆದಿರುತ್ತದೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಆಸಕ್ತಿಯನ್ನು ವಹಿಸಿ ಮುಂದಿನ ಸಾರಿ ಹೆಚ್ಚು ಹಣವನ್ನು ಬಿಡುಗಡೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ದೊರೆಯುವ ನೀರು.

೧೧೫೭. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ದೊರೆಯುವ ನೀರಿನ ಒಟ್ಟು ಪ್ರಮಾಣ ಎಷ್ಟು?

ಆ) ರಾಜ್ಯದ ಅಭಾವ ಪೀಡಿತ ಪ್ರದೇಶಗಳಿಗೆ ಸದರಿ ನೀರನ್ನೊದಗಿಸಿ ಜಮೀನನ್ನು ನೀರಾವರಿ ಮಾಡುವ ಸಲುವಾಗಿ ಪಶ್ಚಿಮಕ್ಕೆ ಹರಿಯುವ ನೀರನ್ನು ಮಿತವ್ಯಯ ರೀತಿಯಲ್ಲಿ ತಿರುಗಿರಿಸಿಕೊಂಡಲ್ಲಿ ಎಷ್ಟು ಪ್ರಮಾಣದ ನೀರು ದೊರೆಯಬಹುದು.

ಇ) ಇದಕ್ಕಾಗಿ ಎಷ್ಟು ವೆಚ್ಚ ತಗಲಬಹುದು?

ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ೫೭.೪೮ ದಶಲಕ್ಷ ಘನ ಮೀಟರುಗಳು (೨೦೦೦ ಟಿಎಂಸಿ)

ಆ) ಪಶ್ಚಿಮಕ್ಕೆ ಹರಿಯುವ ಕೆಲವು ನದಿಗಳ ನೀರನ್ನು ಮಾರ್ಗಾಂತರಿಸುವ ಮತ್ತು

ಇ) ಯೋಜನೆಗಳು ಅನ್ವೇಷಣಾ ಹಂತದಲ್ಲಿವೆ.

ಶ್ರೀ ಬಿ. ಲಕ್ಕಪ್ಪ.—ಪಶ್ಚಿಮಕ್ಕೆ ಹರಿಯುವ ನದಿಗಳ ಒಟ್ಟು ನೀರಿನ ಪ್ರಮಾಣ ಎರಡುಸಾವಿರ ಸಿ. ಎಂ. ಟಿ. ಎಂದು ತಿಳಿಸಿರುತ್ತೀರಿ. ಎಷ್ಟು ಪ್ರಮಾಣದ ನೀರು ಬರುವುದಿದೆ ಅಷ್ಟರ ಮಾರ್ಗವನ್ನು ಬದಲಾಯಿಸಿದರೆ ಎಷ್ಟು ವ್ಯಾವಸಾಯಕ್ಕೆ ಉಪಯೋಗವಾಗುತ್ತದೆ ಎಂದು ನನ್ನ ಪ್ರಶ್ನೆ ಇದೆ. ಆದರೆ ಅದಕ್ಕೆ ತಾವು ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ಎಷ್ಟು ಪ್ರಮಾಣದ ಟಿ. ಎಂ. ಸಿ. ನೀರನ್ನು ವ್ಯವಸಾಯಕ್ಕೆ ಬಿಡುಬಹುದು ಎನ್ನುವುದನ್ನು ಮತ್ತು ಮಾರ್ಗ ಬದಲಾವಣೆಯ ಕಾರ್ಯವನ್ನು ಕೈಗೊಂಡಿದ್ದೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ —ಸಮುದ್ರಕ್ಕೆ ಪಶ್ಚಿಮ ಭಾಗದಲ್ಲಿ ಹರಿಯತಕ್ಕಂಥ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧಾರಣವಾಗಿ ಆರ್ಥಿಕವಾಗಿ ಎಷ್ಟು ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಸಮುದ್ರಕ್ಕೆ ಹರಿಯುವ ನೀರನ್ನು ವ್ಯವಸಾಯಕ್ಕೆ ಉಪಯೋಗ ಮಾಡಿಕೊಳ್ಳಬಹುದೆಂದು ತಜ್ಞರೂ ಕೂಡ ಹೇಳಿದ್ದಾರೆ. ಪ್ರಮುಖವಾಗಿ ಈಗ ನಮ್ಮಲ್ಲಿರತಕ್ಕಂಥ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಪೂರ್ಣಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಿರುವಾಗ ಪಶ್ಚಿಮಕ್ಕೆ ಹರಿಯತಕ್ಕಂಥ ನೀರಿನ ದಿಕ್ಕನ್ನು ಬದಲಾಯಿಸಬೇಕೆಂದರೆ ಸಾಕಷ್ಟು ತೊಂದರೆಯಾಗುತ್ತವೆ. ಪವರ್ ಪ್ರಾಜೆಕ್ಟ್ ಮತ್ತು ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಸಂಪೂರ್ಣವಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದು ಅದಂ ಮುಗಿದಮೇಲೆ ಇದರ ಕಡೆ ಗಮನ ಕೊಡಲಾಗುತ್ತದೆ. ಮತ್ತೆ ಎಕನಾಮಿಕಲ್ ಯೂಸ್‌ಫುಲ್ ವಾಟರ್ ೪೫ ಟಿಎಂಸಿ ಎಂದು ಹೇಳುತ್ತೇನೆ.